RegaNo BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು— ಆರಮನೆ ಸಿಂಸ್ಥೇದಾರ್ ಎಂ. ವಿ. ಸುಬ್ಬರಕಮ್ಮುರು [ಬಿಡಿ ಪ್ರತಿ 3 ಪೈ

9—3—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಭಾರತಕ್ಕೆ ನೇಪಾಳ ದೊರೆಗಳು

ರ

ಅತಿ ಶೀಘ್ರದಲ್ಲೇ ಭಾರತಕ್ಕೆ ಭೇಟಿ ಕೊಡುವ ನಿರ್ಧಾರವನ್ನು ನೇಪಾಳದ ದೊರೆ ಮಹೇಂದ್ರರು ಕೈಗೊಂಡಿರುವರು ಈ ತಿಂಗಳ ಕಡೆಯಲ್ಲಿ ದೊರೆಗಳು ದೆಹಲಿಗೆ ಬರುವರು.

ಟಾಜ್ ಮಹಲ್‌ಗೆ ಶ್ರೀಮತಿ ಕೆನೆಡಿ ಸಂದರ್ಶನ

ಅಮೆರಿಕ ಅಧ್ಯಕ್ಷರ ಪತ್ನಿ ಶ್ರೀಮತಿ ಕೆನೆಡಿ ಟಾಜ್ ಮಹಲಿಗೆ ಭೇಟಿ ಕೊಡುವ ಸಂದರ್ಭದಲ್ಲಿ ಉತ್ತಮ ವ್ಯವಸ್ಥೆಗಳಾಗುತ್ತಿವೆ ಎಂದು ಆಗ್ರಾ ವಾರ್ತೆ ಈ ಮಾಹೆ 15 ರಂದು ಅವರು ದೆಹಲಿಯಿಂದ ವಿಶೇಷ ರೈಲಿನಲ್ಲಿ ಆಗ್ರಾಕ್ಕೆ ಬರುವರು ಟಾಜ್ ಮಹಲನ್ನು ಅವರು ಬೆಳದಿಂಗಳಿನಲ್ಲಿ ಸಹ ನೋಡುವರು ಅವರಿಗೆ ಟಾಜ್ ಮಹಲಿನ ಪ್ರತಿಮೆ ಅರ್ಪಿಸುವರು.

ಸಾದಿಕ್ ಅಲಿಯವರ ಆರೋಪ

ವಿಧ್ವಂಸಕ ಪ್ರದೇಶ ಹಾಗೂ ಉತ್ತರ ಪ್ರದೇಶದಲ್ಲಿ ಜನಸಂಘದ ಬೆಳವಣಿಗೆಗೆ ಕಾಂಗ್ರೆಸಿನಲ್ಲಿರುವ ವಿರೋಧ ಗುಂಪುಗಳೇ ಕಾರಣ ಎಂದು ಭಾರತ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಸಾದಿಕ್ ಅಲಿ ನವ ದೆಹಲಿಯಲ್ಲಿ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಮಹಿಳೆಯರು

ಈ ಬಾರಿ ಲೋಕಸಭೆಯಲ್ಲಿ 34 ನುಂದಿ ಹೆಂಗಸರು ಚುನಾಯಿತರಾಗಿರುವರು. ಈ ಪೈಕಿ ಕಾಂಗ್ರೆಸು ಪಕ್ಷದವರು 28, ಸ್ವತಂತ್ರ ಪಕ್ಷದವರು 4 ಮತ್ತು ಕಮ್ಯೂನಿಸ್ಟ್ ಪಕ್ಷದವರು 2

೦೦೦೦

ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸು ಅಭ್ಯರ್ಥಿಗಳ ವಿರುದ್ಧ ಕೆಲಸ ಮಾಡಿದರೆಂದು ದೆಹಲಿ ಪ್ರದೇಶ ಕಾಂಗ್ರೆಸು ಅಧ್ಯಕ್ಷರಾದ ಶ್ರೀ ಬ್ರಿಜ್ ಮೋಹನರು 5 ಮಂಡಲ ಕಾಂಗ್ರೆಸು ಸಂಸ್ಥೆಗಳನ್ನು ಸಸ್ಪೆಂಡು ಮಾಡಿದ್ದಾರೆ.

ಪ್ರವಾಸಿ ಮಾರ್ಗದರ್ಶಕರಿಗೆ ಕನಿಷ್ಠ ಶಿಕ್ಷಣ ಹಾಗೂ ಸೇವಾ ಷರತ್ತು ಇವುಗಳ ಬಗ್ಗೆ ಭಾರತ ಸರ್ಕಾರ ಶೀಘ್ರದಲ್ಲೇ ಶಾಸನ ಮಾಡುವದು.

ಅರ್ಜಂಟೈನಾದ ಪ್ರಸಿದ್ಧ ಶಿಲ್ಪ ಶಾಸ್ತ್ರಜ್ಞ ಅಂಟೋನಿಯೋ ಸ ಪ್ಲೋ ಮಹಾತ್ಮ ಗಾಂಧಿಯವರ ಪ್ರತಿಮೆ ನಿರ್ಮಿಸಿ ವಿಶೇಷ ಸಮಾರಂಭದಲ್ಲಿ ಭಾರತ ರಾಯಭಾರಿಗೆ ನಿನ್ನೆ ಬ್ಯೂನಾಸ್‌ಏರಿಸ್‌ನಲ್ಲಿ ಅರ್ಪಿಸಿದರು

ಪೈಗಂಬರ ಮಹಮದರ ಚಿತ್ರ ನಿರ್ಮಾಣದ ಬಗ್ಗೆ ಪಶ್ಚಿಮ ರಾಷ್ಟ್ರ ಚಿತ್ರ ಸಂಸ್ಥೆಯೊಂದ ಚಿತ್ರ ಕಯಾರಿಸಲಿರುವದನ್ನು ತಡೆಯಲು ಪಾಕಿಸ್ತಾನ ಪ್ರಯತ್ನಿಸುತ್ತಿದೆ

ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಅಭಿವೃದ್ಧಿಗೆ ಭಾರತ ಸರ್ಕಾರ ಮಂಜೂರ್ಮಾಡಿರುವ ರೂ 5 ಕೋಟಿಯಲ್ಲಿ ಮಾರ್ಚಿ ಅಂತ್ಯಕ್ಕಾಗ ವರ್ಷದಲ್ಲಿ ರೂ 1 ಕೋಟಿ ದೊರೆಯುವದು.

ರಾಜ್ಯಸಭೆಯಲ್ಲಿ 64 ಸ್ಥಾನಗಳಿಗೆ ಚುನಾವಣೆ ನಡೆಯಬೇಕೆಂದು ನವ ದೆಹಲಿ ವಾರ್ತೆ ತಿಳಿಸುತ್ತದೆ

ಆಂಧ್ರಕ್ಕೆ ನೆರವು

1961-62 ನೆಯ ಸಾಲಿಗೆ ಸಾಗರ ಜುರ್ಜನಸಾಗರ ಪ್ರಾಜೆಕ್ಟ್ ನಿರ್ಮಾಣಕ್ಕೆ ಆಂಧ್ರ ಸರ್ಕಾರಕ್ಕೆ ಭಾರತ ಸರ್ಕಾರ ರೂ. 3.53 ಕೋಟಿಗಳನ್ನು ಕೊಟ್ಟಿದೆ.

ಕೋಟಿಗಟ್ಟಲೆ ಸಾಲಾ

ಭಾರತದಲ್ಲಿರುವ ಅಮೆರಿಕ ರಾಯಭಾರಿ ಗಾಲ್ಬ್ರೈತ್ ನವ ದೆಹಲಿಯಲ್ಲಿ ನಿನ್ನೆ ಹೇಳಿಕೆಯಿತ್ತರು. ಭಾರತ ರೈಲ್ವೆಗಳಿಗಾಗಿ ಅಮೆರಿಕ ರೂ 16-27 ಕೋಟಿ ಕೊಡುವದಾಗಿ ನುಡಿದರು.

36 ಬಾರಿ ಸಾವು

ತೊಡರಾದ ಹೃದಯ ಶಸ್ತ್ರ ಚಿಕಿತ್ಸೆಯಲ್ಲಿ ಮೆಲ್ಬೋರ್ನಿನ ಅರ್ನೆಸ್ಟ್ ಜಾಕೆಬ್ಸ್ ಎಂಬಾತನು 36 ಬಾರಿ ಮರಣ ಹೊಂದಿದನು ಈ ಘಟನೆ ಆದುದು 30 ಸೆಕೆಂಡುಗಳಲ್ಲಿ ಈಗವನ ಪರಿಸ್ಥಿತಿ ತೃಪ್ತಿಕರವಾಗಿದೆ.

ಚೊರಿ ಇರಿತ

ವೆಲ್ಲೋಡು ಪಂಚಾಯಿತಿ ಸಮಿತಿ ಅಧ್ಯಕ್ಷರು ಹಾಗೂ ಜಿಲ್ಲ ಕಮ್ಯೂನಿಸ್ಟ ನಾಯಕರಾದ ಶ್ರೀ ಸದಾಯನಮೂರ್ತಿಯವರನ್ನು ನಂಗಳವಾರ ವೆಲ್ಲೋಡಿನಲ್ಲಿ ಹೋಟಲಿನಿಂದ ಮನೆಗೆ ಹೋಗುತ್ತಿದ್ದಾಗ ಅಡ್ಡಗಟ್ಟಿ ಚೂರಿಯಿಂದ ಇರಿಯಲಾಗಿದೆ ಅಲ್ಲಿಗೆ ರಿಸರ್ವ ಪೋಲೀಸ್ ನಲ್ಲಿ 2 ನೆಯ ರಾಷ್ಟ್ರೀಯ ಮೇಳ ಸರನ್ನು ಕಳಿಸಿದೆ.

ಶ್ರೀಮತಿ ಕೆನಡಿಯವರ ಕಾಣಿಕೆ

ಭಾರತಕ್ಕೆ ಸಂದರ್ಶನ ಕೊಡುವ ಶ್ರೀಮತಿ ಕೆನೆಡಿಯವರು ಮಕ್ಕಳ ಕಲಾ ವಸ್ತುಗಳನ್ನು ಭಾರತಕ್ಕೆ ಕೊಡವರು. ನವ ದೆಹಲಿಯ ಅಮೆರಿಕ ಕೇಂದ್ರಗಳ ವಂದಿಯ ಪ್ರಕಾರ ಅವರು ಕೊಡುವ ಕಾಣಿಕೆ ಕ್ರೀಡೆ ಹಾಗೂ ಅಭಿನಯ ಕೇಂದ್ರ.

೦೦

ಪ್ರಮಾಣ ವಚನ ಸ್ವೀಕರಿಸಿದನಂತರ ಶ್ರೀ ಎಸ್ ಆರ್ ಕಂಠಿಯವರು ತಮ್ಮ ಮಂತ್ರಿಮಂಡಲದ ರಚನೆ ಕುರಿತು ಹೈಕಮಾಂಡಿನೊಡನೆ ಮಾತುಕತೆ ನಡೆಸಲು ಶನಿವಾರ ದೆಹಲಿಯಲ್ಲಿರುವರು

ಈ ತಿಂಗಳು 11 ರಂದು ಮುಖ್ಯಮಂ ವಾಸ್ತವಾಗುವದು.

× ಮಂಡಿಕೇರಿಗೆ ಮಾನವತ್ಕೃದು ವೈಲಿಗಳ ದೂರವಿರುವ ಶಾಂತಹಳ್ಳಿಯಲ್ಲಿ 70 ವರ್ಷದ ಮುದುಕಿಯ ಕೊಲೆ ನಡೆದಿದೆ

× ಅಡ್ಯಾರಿನ ಗಾಂಧಿನಗರದಲ್ಲಿ ಈ ಮಾಹೆ 12 ನೆಯ ತಾ|| ಶ್ರೀ ಲ ನಂತಪದ್ಮನಾಭಸ್ವಾಮಿ ದೇವಾಲಯದ ಮೊದಲನೆಯ ಕುಂಭಾಭಿಷೇಕ ಶ್ರೀ ಶೃಂಗೇರಿ ಜಗದ್ಗುರುಗಳವರ ಸಮ್ಮುಖದಲ್ಲಿ ನೆರವೇರುವದು

× ಅಮೆರಿಕದ ಅಧ್ಯಕ್ಷರಿಂ ಪೈಕಿ ಅತ್ಯಂತ ಉತ್ಸಾಹವಾಗಿ ಉಡುಪು ಧರಿಸುವವರು ಅಧ್ಯಕ್ಷ ಕೆನೆಡಿಯವರು ಎಂದು ಅಮೆರಿಕದ ಕಸ್ಟಂಸ್ ಟೇಲರ್ಸ್ ಗಿಲ್ಡ್ ನಿನ್ನೆ ನ್ಯೂಯಾರ್ಕಿನಲ್ಲಿ ತಿಳಿಸಿದೆ.

× ಕಾರಣವಿಲ್ಲದೆ, ಪ್ರಯಾಣಿಕರನ್ನು ಸರ್ಕಾರಿ ಬಸ್ಸು ಡ್ರೈವರುಗಳು ಕೂಡಿಸಿಕೊಳ್ಳದಿದ್ದರೆ ಅವರು ಕ್ರಮಾರ್ಹರೆಂದು ಜರಾತ್ ಸರ್ಕಾರದಲ್ಲಿ ಸ್ಪಷ್ಟವಾಗಿದೆ

ಕಾರ್ಯಕರ್ತನ ಆತ್ಮಹತ್ಯೆ

ಮಡಕೇರಿ— ಕಳೆದ ಚುನಾವಣೆಯಲ್ಲಿ ಪೀಂಜಸೇಟಿ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಸ್ವತಂತ್ರ ಸ್ಪರ್ಧಿ ಏಂ ಕೆಲಸವಾಡಿದ ಕಲಪಾಂಡ ಸುಬ್ಬಯ್ಯನೆಂಬಾತನು ತನ್ನ ಅಭರ್ಥಿ ಸೋತುವಕ್ಕೆ ನಿರಾಶೆಗೊಂಡು ಫಲಿತಾಂಶ ಪ್ರಕಟವಾದ ಮಾರನೇ ದಿವಸ ಆತ್ಮಹತ್ಯಮಾಡಿಕೊಂಡನೆಂದು ಬಲಜಿಗಾಮದಿಂದ ವಂದಿಯಾಗಿದೆ.

೦೦

ಚಾಂಪಿಯರ್ಷಿಪ್‌ನಿಂದ ವಾಪಸ್

ಬೆಂಗಳೂರು 8— ಮೈಸೂರು ರಾಜ್ಯದ ಹಾಕಿ ಟೀಮು ನ್ಯಾಷನಲ್ ಚಾಂಪಿಯರ್‌ಷಿಪ್‌ನಲ್ಲಿ ಭಾಗವಹಿಸಲು ತಾ|| 6 ರಂದು ಪೂನಾಕ್ಕೆ ಪ್ರಯಾಣ ಮಾಡಬೇಕಿತ್ತು, ಆದರೆ ಸರ್ವಿಸೆಸ್ ಕಂಟ್ರೋಲು ಬೋರ್ಡು ಟೀಮಿನಲ್ಲಿ ಸರ್ವಿಸ್ಸಿನ ಜನರನ್ನು ಸೇರಿಸಿಕೊಳ್ಳಲು ಅನುಮತಿ ತಿರಸ್ಕರಿಸಿದ್ದರಿಂದ ಮೈಸೂರು ಟೀಂ ವಾಪಸ್ಸಾಯಿತು.

೦೦

ಕೊಲೆ ಮತ್ತು ಕಳ್ಳತನ

ಮಡಕೇರಿ— ಇಲ್ಲಿಗೆ 35 ಮೈಲಿ ದೂರದ ಶಾಂತಿಗ್ರಾಮದಲ್ಲಿ ತಾ || 3 ರಂದು 70 ವರ್ಷದ ಮುದುಕಿಯು ಕೊಲೆಯಾಗಿದೆ — ಅವಳ ಮಗ ವತ್ತು ಮನೆಯವರೆಲ್ಲಾ ಸೋಮವಾರಪೇಟೆಗೆ ಸಿನಿಮಾ ನೋಡಲು ಹೋಗಿದ್ದರು : ಮುದುಕಿ ಕೊಲೆ ಮತ್ತು ಆಳು ತೀವ್ರ ಗಾಯಗೊಂಡಿರುವದಂ ಜೊತೆಗೆ ಮನೆಯಲ್ಲಿನ ಬೆಲೆ ಬಾಳುವ ವಸ್ತುಗಳೂ ಹಣವೂ ಅಪಹರಣವಾಗಿದೆ.

೦೦

ದಿವ್ಯವಾಣಿ

ಆಧ್ಯಾತ್ಮಿಕ ಜಾಗೃತಿಯಿಂದ ಮಾತ್ರ ನಿಜವಾದ ಶಾಂತಿ ದೊರಕುವುದು ; ವಿಶ್ವ ಶಾಂತಿಗೆ, ಜನತೆಯು ಮುಂದಿರುವ ಎಲ್ಲಾ ಬಿಕ್ಕಟ್ಟುಗಳ ಪರಿಹಾರಕ್ಕೆ ಧರ್ಮಜಾಗೃತಿಯೊಂದೇ ಮುಖ್ಯವಾದ ಸಾಧನ.

— ಶ್ರೀ ದ್ವಾರಕಾ ಜಗದ್ಗುರುಗಳು

೦೦

ಸಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞಶಿಖಾಮಣಿ
ಪಂಪಶ್ಯಾಸ್ತ್ರಜ್ಯೋಯಿಸರಂದ

10 ಶನಿವಾರ ಭೌತಿ - ಪಂಚಮಿ ಅಶ್ವಿನಿ

ನೀತಿ ಬೋಧಕ ವಿಷಯಗಳು

★

ಪರ್ವತವು ತನ್ನ ಮೇಲಿದ್ದ ವಂಕ ಕಣಗಳನ್ನು ಬೀಸಿ ಹೊಂದೂಡಿಸಲು ಗಾಳಿಗೆ ಅನುವತಿ ನೀಡಿತು ; ಒಂದು ಸಹಸ್ರ ವರ್ಷಗಳ ನಂತರ ಪರ್ವತವೇ ನೆಲಸಮವಾಗಿದ್ದಿತು !

೦೦

ನೀನು ಯಾತಕ್ಕೆ ಯಾವಾಗಲೂ ಮುಂಜಾನೆಯಲ್ಲೇ ಕೂಗುವೆ ? ಸಂಜೆ ಯಲ್ಲೇಕೆ ಕೂಗುವುದಿಲ್ಲ ? ಎಂದು ಒಮ್ಮೆ ಹುಂಜವನ್ನು ಕೇಳಲಾಯಿತು. 'ಯಾಕೆಂದರೆ, ರಾತ್ರಿಯಾಗುವುದನ್ನು ಎಲ್ಲರೂ ಕಾಣಬಲ್ಲರು : ಆದರೆ ಬೆಳಗಾದರೂ ಮಲಗೇ ಇರುವುದು ತುಂಬ ಸುಲಭ' ಎಂದು ಉತ್ತರಿಸಿತು ಹುಂಜ.

ಮುನಿಸಿಪಲ್ ಕಮಿಷನರ್
ರವರ ಆಫೀಸು,
ಸಿಟಿ ಮುನಿಸಿಪಲ್ ಕೌನ್ಸಿಲ್,
ಮೈಸೂರು ತಾ || 2-3-62

R8. A. S. 3/1961-62

ಸಂಕೆಪ ಪ್ರಕಟಣೆ

★

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ : ಮೈಸೂರು ಸಿಟಿ ಕೆಸರೆಯಲ್ಲಿರುವ ಕಸಾಯಿ ಮನೆಗೆ ವಧೆಗಾಗಿ ತರತಕ್ಕ ಕುರಿ ಆಡು ಮತ್ತು ಮೇಕೆಗಳ ಮೇಲೆ 1962-63 ನೇ (1-4-62 ರಿಂದ 31-3-63 ಪೂರ್ತಿ) ವಿಧಾಯಕ ದಂತೆ 'ಡೈಲಿ ಫೀ' ವಸೂಲ್ಮಾಡುವ ಹಕ್ಕನ್ನು ತಾರೀಖು 10-3-1962 ನೇ ಶನಿವಾರ ಬೆಳಿಗ್ಗೆ 11 ಘಂಟೆಗೆ ಮುನಿಸಿಪಲ್ ಕಮಿಷನರ್ ರವರಿಂದ ಕಸಾಯಿಮನೆ ಆವರಣದಲ್ಲಿ ಬಹಿರಂಗವಾಗಿ ಹರಾಜು ಮೂಲಕ ವಿಲೇವಾರಿಮಾಡಲಾಗುತ್ತೆ. ಇಷ್ಟವುಳ್ಳವರು ಸಕಾಲಕ್ಕೆ ಹಾಜರಾಗಿ ಹರಾಜು ನಿಬಂಧನೆಗಳಿಗೆ ಒಳಪಟ್ಟು ಪಡೆಯಲು ಮೂಲಕ ಬಾಬನ್ನು ಪಡೆಯಬಹುದು.

ಹರಾಜು ನಿಬಂಧನೆಗಳು ಮತ್ತು ಹೆಚ್ಚಿನ ವಿಷಯಗಳನ್ನು ರೆವಿನ್ಯೂ ಆಫೀಸಿನಲ್ಲಿ ಆಫೀಸು ವೇಳೆಯಲ್ಲಿ ತಿಳಿಯಬಹುದು.

(ಸಹಿ) B. S. ನಂಜುಂಡೆ ಗೌಡ
ಮುನಿಸಿಪಲ್ ಕಮಿಷನರ್

THE DIFFERENCE BETWEEN THIS...

TRADE MARK

AND THIS... IS ALWAYS THIS..

GRIPE SYRUP I.T.L.
For digestive disorders of children.
THE MYSORE INDUSTRIAL & TESTING LABORATORY LTD., BANGALORE-3.
Madras Sales Office:- 35/37, THAMBU CHETTY STREET, MADRAS-1.

Our Bangalore Sales Depot address—
71/4 Arcot Sreenivasachar St., Bangalore 2.

ವುಡ್‌ಲಾಂಡ್ಸ್ ಯಶಸ್ವಿ 5 ನೇ ವಾರ

ಈ ಮನಮೋಹಕ ಚಿತ್ರವನ್ನು ನೀವು ಇನ್ನೂ ನೋಡದಿದ್ದರೆ ಇಂದೇ ನೋಡಿ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್
ಸಂಗೀತ- ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— ಅಮೋಘ 3 ನೇ ವಾರ

ಮೋಹಿನಿ ರುಕ್ಮಾಂಗದ

[ಏಕಾದಶಿ ಮಹಾತ್ಮೆ] (ಕನ್ನಡ)
ನಟವರ್ಗ— ಜಮುನ, ಜಗ್ಗಯ್ಯ, ಸೂರ್ಯಕಲಾ, ರೇಲಂಗಿ, ಕಾಂತಾರಾವ್
[ದಿನವಹಿ 3 ಆಟಗಳು]

SHAKTI SUDHA

A Superb Tonic

Edited, Printed & Published by the Proprietor, Dharma Prachara Nirata M. S. Krishna Rao at the Satyavadi Press Chamarajapuram, Mysore 4.